**ದಿನಾಂಕ 02.04.2019 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಹೆಚ್.ಎಸ್.ಎ ವಕೀಲರಿಂದ**

ನಾನು ಹುಟ್ಟಿದಾಗಿನಿಂದ ಅಂಕನಹಳ್ಳಿ ಗ್ರಾಮದಲ್ಲೆ ವಾಸ ಇದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ವಾದಿ ಮತ್ತು 2 ನೇ ಪ್ರತಿವಾದಿಗಳನ್ನು ನಾನು ಹುಟ್ಟಿದಾಗಿನಿಂದ ನೋಡುತ್ತಿದ್ದೇನೆ. ವಾದಿ ನಮ್ಮ ಊರಿನಲ್ಲೆ ವಾಸ ಇದ್ದಾರೆ. ವಾದಿಯು ಚೆನ್ನಾಂಬಿಕ ಥಿಯೇಟರ್ ಬಳಿ ಇರುವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಕಾಳಮ್ಮ ಎಂಬುವವರು ನನಗೆ ಗೊತ್ತಿದೆ. ಕಾಳಮ್ಮ ಎಂಬುವವರು 50 ವರ್ಷಗಳ ಹಿಂದೆ ನಮ್ಮ ಗ್ರಾಮದಲ್ಲೆ ವಾಸ ಇದ್ದರು. ಕಾಳಮ್ಮ ಎಂಬುವವರು ಮೊದಲು ಯಾರನ್ನು ಮದುವೆ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಕಾಳಮ್ಮ ಎಂಬುವವರು ಕಟ್ಟಹಳ್ಳಿ ಗ್ರಾಮದಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ಕಾಳಮ್ಮ ಎಂಬುವವರು ಮೋರಿ ಜವರಯ್ಯ ಎಂಬುವವರನ್ನು ಮದುವೆ ಆಗಿದ್ದರು ಎಂಬುವುದು ನನಗೆ ಗೊತ್ತಿಲ್ಲ. ಕಾಳಯ್ಯ ಎಂಬುವವರು ಕಟ್ಟಹಳ್ಳಿ ಗ್ರಾಮದಲ್ಲಿ ಜನಿಸಿದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕಾಳಯ್ಯ ಎಂಬುವವರು ಕಟ್ಟಹಳ್ಳಿ ಗ್ರಾಮದಲ್ಲೆ ಬೆಳೆದು ದೊಡ್ಡವರಾಗಿದ್ದಾರೆ ಎಂದರೆ ಸಾಕ್ಷಿ ನನಗೆ ಬುದ್ಧಿ ಬಂದಾಗಿದಿಂದ ಕಾಳಯ್ಯನವರು ಅಂಕನಹಳ್ಳಿ ಗ್ರಾಮದಲ್ಲೆ ಬೆಳೆದು ದೊಡ್ಡವರಾದರು ಎಂದು ಹೇಳುತ್ತಾರೆ. ಮೋರಿ ಜವರಯ್ಯನವರಿಗೆ ಕಟ್ಟಹಳ್ಳಿಯಲ್ಲಿ ಎಷ್ಟು ಜನ ಹೆಂಡತಿಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಮೋರಿ ಜವರಯ್ಯನವರಿಗೆ ಮತ್ತು ಅವರ ಮೊದಲ ಹೆಂಡತಿ ಕಾಳಮ್ಮರವರ ದಾಂಪತ್ಯದ ಫಲವಾಗಿ ಕಾಳಯ್ಯ ಎಂಬುವವರು ಹುಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯು ಕೋಡಯ್ಯ ಮತ್ತು ಕಾಳಮ್ಮರವರಿಗೆ ಹುಟ್ಟಿದ್ದಾರೆ ಎಂದು ತೋರಿಸುವ ದಾಖಲೆಯನ್ನು ನಾನು ಕೊಟ್ಟಿಲ್ಲ. ಮೋರಿ ಜವರಯ್ಯನವರಿಗೆ ಹುಚ್ಚಮ್ಮ ಎಂಬ 2 ನೇ ಹೆಂಡತಿ ಇದ್ದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೋರಿ ಜವರಯ್ಯ ಮತ್ತು ಹುಚ್ಚಮ್ಮ ಎಂಬುವವರಿಗೆ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೋರಿ ಜವರಯ್ಯ ಹುಚ್ಚಮ್ಮ ಮತ್ತು ಕಾಳಮಮ್ಮ ಮರಣ ಹೊಂದಿದ ನಂತರ ನಿಂಗಾಜಿ ಎಂಬುವವರನ್ನು 3 ನೇ ಹೆಂಡತಿಯಾಗಿ ಮದುವೆ ಆಗಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೋರಿ ಜವರಯ್ಯ ಮತ್ತು ನಿಂಗಾಜಿಗೆ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮೋರಿ ಜವರಯ್ಯನ 4 ನೇ ಹೆಂಡತಿ ಜವರಮ್ಮ ಈಗಲೂ ಇದ್ದಾರೆ ಎಂದರೆ ಸಾಕ್ಷಿ ನಾನು ನೋಡಿಲ್ಲ ನನಗೆ ಗೊತ್ತಿಲ್ಲ ಎಂದು

ಹೇಳುತ್ತಾರೆ. ಜವರಮ್ಮನವರಿಗೆ ಜಯಮ್ಮ, ಸ್ವಾಮಿ ಮತ್ತು ರವಿ ಎಂಬ 3 ಜನ ಮಕ್ಕಳು ಇದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೋಡಯ್ಯನವರಿಗೆ ಹುಚ್ಚಮ್ಮ ಎಂಬ ಮೊದಲನೆ ಹೆಂಡತಿ ಇದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೋಡಯ್ಯ ಮತ್ತು ಹುಚ್ಚಮ್ಮನವರಿಗೆ ಮಕ್ಕಳಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೋಡಯ್ಯ ಮತ್ತು ಕಾಳಮ್ಮನವರಿಗೆ ಸ್ವಾಮಿ, ದೇವರಾಜ ಮತ್ತು ಜಯಮ್ಮ ಎಂಬ ಮಕ್ಕಳು ಇದ್ದಾರೆ ಎಂದರೆ ಸಾಕ್ಷಿ ನಾನು ಅದನ್ನು ನೋಡಿಲ್ಲ ಎಂದು ಹೇಳುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ಹಂಚಿಕೊಂಡಿರುವ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಅವರುಗಳು ಹಂಚಿಕೊಂಡಿರುವ ಜಮೀನು ಸುಮಾರು 30 ಗುಂಟೆ ಬರಬಹುದು. ಆ 30 ಗುಂಟೆ ಕಾಲುವೆ ಪಕ್ಕ ಬರುತ್ತದೆ. 2 ನೇ ಪ್ರತಿವಾದಿಗೂ ಈ 30 ಗುಂಟೆ ಪೈಕಿ ಜಮೀನು ಬಂದಿರಬಹುದು. ದರಕಾಸ್ತು ಜಮೀನನ್ನು ಏಕೆ ಹಂಚಿಕೊಂಡಿಲ್ಲ ಎಂದರೆ ಸಾಕ್ಷಿ ಕೋಡಯ್ಯನವರು ಮಾರಾಟ ಮಾಡಿದ್ದರಿಂದ ಪುನಃ ಅದನ್ನು ತೆಗೆದುಕೊಂಡು ಹಂಚಿಕೊಂಡಿಲ್ಲ ಎಂದು ಹೇಳುತ್ತಾರೆ. ರಂಗೇಗೌಡ ಮತ್ತು ಅಮೀರ್ ಸಾಬ್‌ನವರಿಗೆ ಕೋಡಯ್ಯನವರು ಮೊದಲು ಮಾರಾಟ ಮಾಡಿದ್ದರು. ಮಾರಾಟ ಮಾಡಿದ ಜಮೀನನ್ನು 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ದಾವೆ ಹಾಕಿ ವಾಪಸ್ಸು ಪಡೆದುಕೊಂಡಿದ್ದಾರೆ. ಯಾವ ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದು ನನಗೆ ಗೊತ್ತಿಲ್ಲ. ಆ ನಂತರ ಆ ಆಸ್ತಿಗೆ ಸಂಬಂಧಿಸಿದ ವ್ಯವಹಾರಗಳು ಏನಾಯಿತು ಎಂದು ನನಗೆ ಗೊತ್ತಿಲ್ಲ. ಕಾಳಯ್ಯ ಏಕೆ ದಾವೆ ಹಾಕಿಲ್ಲ ಎಂದರೆ ಸಾಕ್ಷಿ ಹೋಗಿಲ್ಲ ಎಂದು ಹೇಳುತ್ತಾರೆ. ರಂಗೇಗೌಡ ಎಂಬುವವರು 2 ನೇ ಪ್ರತಿವಾದಿಯ ಮೇಲೆ ದಾವೆ ಹಾಕಿರುವ ವಿಚಾರ ನನಗೆ ಗೊತ್ತಿದೆ. ಆ ದಾವೆ ಏನಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಆ ದಾವೆಯಲ್ಲಿ ಕಾಳಯ್ಯನವರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ರಂಗೇಗೌಡ ಹಾಕಿದ್ದ ದಾವೆ ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕಾಳಯ್ಯ ಕೋಡಯ್ಯನ ಮಗ ಆಗದೇ ಇರುವುದರಿಂದ ಆ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಜಮೀನಿಗೂ ದಾವಾ ಜಮೀನಿಗೂ 200 ಮೀಟರ್ ದೂರ ಇರಬಹುದು. ನನ್ನ ಜಮೀನಿಗೂ ದಾವಾ ಜಮೀನಿಗೂ 1 ಕಿ.ಮೀ ದೂರ ಆಗುತ್ತದೆ ಎಂದರೆ ಸರಿಯಲ್ಲ. ರಂಗೇಗೌಡ ದಾಖಲಿಸಿದ್ದ ದಾವೆ ನಂಬರ್ 255/12 ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ದಾವೆ ದಿನಾಂಕ 24.02.2015 ರಂದು ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

ಕಾಳಮ್ಮನವರು ತೀರಿ ಹೋಗಿ ಎಷ್ಟು ವರ್ಷ ಆಗಿದೆ ಎಂದು ನನಗೆ ಜ್ಞಾಪಕವಿಲ್ಲ. ಕೋಡಯ್ಯನವರು ತೀರಿ ಹೋಗಿ ಎಷ್ಟು ವರ್ಷ ಆಗಿದೆ ಎಂದು ಹೇಳಲು ಸರಿಯಾಗಿ ಗೊತ್ತಿಲ್ಲ. ರಂಗೇಗೌಡರ ವಿರುದ್ಧ ಎ.ಸಿ. ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿ ಮತ್ತು ಇತರರು ಹಾಕಿದ್ದಾರೆ ಆ ಕೇಸಿನ ಬಗ್ಗೆ ನನಗೆ ಗೊತ್ತಿಲ್ಲ. ನಂತರ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ಖರ್ಚುವೆಚ್ಚಗಳನ್ನು 2 ನೇ ಪ್ರತಿವಾದಿ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹೆಸರು ಮೊಗಣ್ಣ. ನನ್ನ ತಂದೆಯ ಹೆಸರು ಜವರಯ್ಯ ಸಾಕ್ಷಿ ಸ್ವತಃ ಯಲ್ಲಯ್ಯ ಎಂದು ಕೂಡ ಕರೆಯುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ದೃಢೀಕೃತ ಮತದಾರರ ಪಟ್ಟಿಯನ್ನು ತೋರಿಸಿ ಅದರಲ್ಲಿ ಇರುವ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿ.ಡಿ. 1 ಎಂದು ಗುರುತಿಸಿಕೊಳ್ಳಲಾಯಿತು. ನಿ.ಡಿ. 1 ರ ಪ್ರಕಾರ ನನಗೆ ಮತದಾರರ ಗುರುತಿನ ಚೀಟಿ ಇದೆ ಮತ್ತು ಅದರಂತೆ ನಾನು ಮತ ಚಲಾವಣೆ ಮಾಡುತ್ತೇನೆ. ನಿ.ಡಿ. 1 ರ ಪ್ರಕಾರ ನನ್ನ ಹೆಸರು ಯಲ್ಲಯ್ಯ ಬಿನ್ ಯಳವಯ್ಯ ಎಂದರೆ ಸರಿಯಲ್ಲ. ನಿ.ಡಿ. 1 ನ್ನು ಮರೆಮಾಚಿ ಮೊಗಣ್ಣ ಎಂದು ಸುಳ್ಳು ಸಾಕ್ಷ್ಯ ಕೊಟ್ಟಿದ್ದೇನೆ ಎಂದರೆ ಸಾಕ್ಷಿ ಅದನ್ನು ತಿದ್ದುಪಡಿ ಮಾಡಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ತಿದ್ದುಪಡಿ ಮಾಡಿಕೊಂಡಿರುವ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಜಮೀನು ಈಗ ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ನಾನು ತಿಳಿದುಕೊಂಡಿಲ್ಲ. ನ್ಯಾಯಾಲಯಗಳಲ್ಲಿ ಓಡಾಡಿ 2 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಈಗಲೂ 2 ನೇ ಪ್ರತಿವಾದಿಯ ಸ್ವಾಧೀನದಲ್ಲಿ ದಾವಾ ಜಮೀನು ಇದೆ ಎಂದರೆ ಸಾಕ್ಷಿ ಸ್ವತಃ 3 ಜನ ಒಟ್ಟಿಗೆ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆ ಯಾರು ದಾವಾ ಸ್ವತ್ತಿನ ಸ್ವಾಧೀನ ಇಲ್ಲ ಎಂದರೆ ಸಾಕ್ಷಿ ವಾದಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ನಾನು ಚಿಕ್ಕ ಹುಡುಗ ಇದ್ದಾಗ 6 ವರ್ಷ ಬಾಂಬೆಯಲ್ಲಿ ಇದ್ದೆನು. ನನಗೆ 30 ವರ್ಷ ಇದ್ದಾಗ ಬಾಂಬೆಯಿಂದ ಊರಿಗೆ ವಾಪಸ್ಸು ಬಂದೆನು. ವಾದಿಯು ನಮಗೆ ನೆಂಟರಲ್ಲ. ವಾದಿ ಮತ್ತು ಪ್ರತಿವಾದಿಗಳೊಂದಿಗೆ ನಾನು ಚೆನ್ನಾಗಿದ್ದೇನೆ. ವಾದಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಕಾಳಮ್ಮ ಮತ್ತು ಕೋಡಯ್ಯನಿಗೆ ಜನಿಸದೇ ಇದ್ದರೂ ಜನಿಸಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ವಾದಿ ಈ ದಿನ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.